# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂ. 190–ಮಂಗಮ್ಮನಪಾಳ್ಯ

### ವಾರ್ಡ್ ಸಮಿತಿ ಸಭೆಯ ನಡವಳಿಗಳು

ಮಾನ್ಯ ಅಧ್ಯಕ್ಷರು/ನೋಡಲ್ ಅಧಿಕಾರಿ, ಸ.ಕಾ.ನಿ.ಅ. (ಹೆಚ್.ಎಸ್.ಆರ್ ಉಪವಿಭಾಗ) ರವರು ದಿನಾಂಕ: 09.11.2021 ರಂದು ಬೆಳಿಗ್ಗೆ 11.30 ಘಂಟೆಗೆ Ward ಸಮಿತಿ ಸಭೆಯನ್ನು 190–ಮಂಗಮ್ಮನಪಾಳ್ಯ, ವಾರ್ಡ್ ಕಛೇರಿ (ಹೆಚ್.ಎಸ್.ಆರ್ ಉಪವಿಭಾಗ)ರಲ್ಲಿ ನಡೆಸಿದ, ವಾರ್ಡ್ ಸಮಿತಿ ಸಭೆಯ ನಡವಳಿಗಳು.

**ಉಪಸ್ಥಿತರು:**

**ಹಾಜರಿದ್ದ ಅಧ್ಯಕ್ಷರು/ನೋಡಲ್ ಅಧಿಕಾರಿಗಳು, ಸಹಾಯಕ ಅಭಿಯಂತರರು / ಕಾರ್ಯದರ್ಶಿ, ಸದ್ಯಸರುಗಳು, ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು**

| ಕ್ರ.ಸಂ | ಹೆಸರು | ಹುದ್ದೆ |
|---|---|---|
| 1 | ಶ್ರೀ ಟಿ ಹನುಮಂತರಾಯ | ವಾರ್ಡ್ ನೋಡಲ್ ಅಧಿಕಾರಿ (ಎ.ಇ.ಇ) |
| 2 | ಶ್ರೀ ರಾಜಗೋಪಲ್ ಬಾಬು.ಎನ್ | ಕಾರ್ಯದರ್ಶಿ, ಸಹಾಯಕ ಅಭಿಯಂತರರು ವಾರ್ಡ್ ಸಂ.190 |
| 3 | ಶ್ರೀ ಚಂದ್ರರೆಡ್ಡಿ | ಸದಸ್ಯರು |
| 4 | ಶ್ರೀ ಉಮೇಶ್.ಎಸ್ | ಸದಸ್ಯರು |
| 5 | ಶ್ರೀ ಸುರೇಶ್ ರೆಡ್ಡಿ | ಸದಸ್ಯರು |
| 6 | ಶ್ರೀ ಗೋಪಿನಾಥ | ಸದಸ್ಯರು |
| 7 | ಶ್ರೀ ಮೌಲಸಾಬ್ | ಸಾರ್ವಜನಿಕರು |
| 8 | ಶ್ರೀಮತಿ ಎಂ. ರಜನಿ | ಸಾರ್ವಜನಿಕರು |
| 9 | ಡಾ॥ ಯೋಗೇಶ್ | ಪ್ರಾ.ಆ.ಕೇಂ (ವೈದ್ಯರು) |
| 10 | ಡಾ॥ ಮಾಧವಿ | ಪ್ರಾ.ಆ.ಕೇಂ (ವೈದ್ಯರು) |
| 11 | ಡಾ॥ ಮೊಹಮ್ಮದ ಅಬ್ಬಾಸ್ | ಸಹಾಯಕ ನಿರ್ದೇಶಕರು, ಪಶುಪಾಲನೆ (ಬೊ.ವ.) |
| 12 | ಶ್ರೀ ಹೆಚ್.ಆರ್ ಚಂದ್ರಶೇಖರ | ತೋಟಗಾರಿಕೆ ಅಧೀಕ್ಷಕರು (ಬೊ.ವ.) |
| 13 | ಶ್ರೀ ಸಾಯಿಬಣ್ಣ | ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 14 | ಶ್ರೀ ಡಿ. ವಿಜಯಕುಮಾರ್ | ಕಿರಿಯ ಅಭಿಯಂತರರು, ಬೆಸ್ಕಾಂ |
| 15 | ಶ್ರೀ ಬಾಲರಾಜ್ ಸಿ.ಜಿ | ಕಿರಿಯ ಅಭಿಯಂತರರು, ಬೆಸ್ಕಾಂ |
| 16 | ಹೆಚ್.ಆರ್. ಹರೀಶ್ | ಅರಣ್ಯ ವಲಯ ಅಧಿಕಾರಿ (ಬೊ.ವ.) |
| 17 | ವಿನೋದ್.ಜಿ | ಹಿರಿಯ ಆರೋಗ್ಯ ಪರಿವೀಕ್ಷಕರು |
| 18 | ಶ್ರೀ ಅಬ್ದುಲ್ ರಹಮಾನ್ | ಕಂದಾಯ ನಿರೀಕ್ಷಕರು |
| 19 | ಶ್ರೀ ನಟರಾಜ್ ಹೆಚ್.ವಿ | ಕಂದಾಯ ವಸೂಲಿಗಾರ |
| 20 | ಶ್ರೀ ಎನ್.ವೈ ಮುನಿರಾಜು | ಕಂದಾಯ ವಸೂಲಿಗಾರ |
| 21 | ಶ್ರೀ ಹೊನ್ನೂರ್ ಬಾಷ | ಕಿರಿಯ ಆರೋಗ್ಯ ಪರಿವೀಕ್ಷಕರು |
| 22 | ಶ್ರೀ ಹೆಚ್. ನರಸಪ್ಪ | ತೋಟಗಾರಿಕೆ ಸಹಾಯಕರು |
| 23 | ಶ್ರೀ ಶಿವಕುಮಾರ್.ಎಲ್ | ವಾರ್ಡ್ ಮಾರ್ಷ್ |
| 24 | ಶ್ರೀ ಸುನೀಲ್ | ಬೀದಿ ದೀಪ |

ವಾರ್ಡ್ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ, ಸದಸ್ಯರಿಗೆ ಹಾಗೂ ಸ್ವಯಂ ಸೇವಕರನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭಾ ನಡವಳಿಯ ಪ್ರತಿ ಅಂಶದ ಬಗ್ಗೆ ಚರ್ಚಿಸುತ್ತಾ, ಸಭೆಯನ್ನು ಆರಂಭಿಸಿದ್ದರು.

**(ಮ.ತಿ.ನೋ)**

Scanned with

- **<u>ತೋಟಗಾರಿಕೆ ಇಲಾಖೆ</u>**
  1. ಹಿಂದಿನ ಸಭೆಯ ದಿನಾಂಕ: 12.10.2021 ರಂದು ಶ್ರೀ ಚಂದ್ರರೆಡ್ಡಿ ಮತ್ತು ಇತರೆ ಸದಸ್ಯರು ಪ್ರಸ್ತಾಪಿಸಿರುವ ವಿಷಯದ ಬಗ್ಗೆ ಚರ್ಚಿಸಲಾಗಿದ್ದು, ಇಂದಿನ ಸಭೆಯಲ್ಲಿ ಹಾಜರಿದ್ದ ಶ್ರೀ ಚಂದ್ರಶೇಖರ ತೋಟಗಾರಿಕೆ ಅಧೀಕ್ಷಕರು ರವರು ಉದ್ಯಾನವನಗಳ ನಿರ್ವಹಣೆ ಮಾಡಲು ನಮ್ಮ ಅಧೀನದಲ್ಲಿ ಇದ್ದು ಪಾದಚಾರಿ ಮಾರ್ಗವನ್ನು ನಿರ್ಮಿಸಲು ಸಹಾಯಕ ಕಾರ್ಯಪಾಲಕ ಅಭಿಯಂತರರು (ಯೋಜನೆ ವಿಭಾಗ) ಇಲಾಖೆಗೆ ಬರುತ್ತಿದ್ದು, ಸದರಿ ಅಧಿಕಾರಿಗಳಿಗೆ ಕಡತವನ್ನು ಮತ್ತು ಸ್ಥಳವನ್ನು ಪರಿಶೀಲಿಸಲು ಕ್ರಮ ವಹಿಸುವುದಾಗಿ ತಿಳಿಸಿದರು ಹಾಗೂ ಇತ್ತೀಚೆಗೆ ಭಾರಿ ಮಳೆ ಸುರಿಯುತ್ತಿದ್ದು, ಹುಲ್ಲು ಕತ್ತರಿಸಲಾಗುತ್ತಿರುವುದಿಲ್ಲ ಮುಂದಿನ ದಿನಗಳಲ್ಲಿ ಹುಲ್ಲು ಒಣಗಿದ ನಂತರ ಕತ್ತರಿಸಲು ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು.
  2. ವಾರ್ಡ್‌ನ ಹೊಸಪಾಳ್ಯ ನರ್ಸರಿ ಸುತ್ತಮುತ್ತ ಹಳೆಯ ಫೆನ್ಸಿಂಗ್‌ಗಳು ಇದ್ದು ಹೊಸದಾಗಿ ಫೆನ್ಸಿಂಗ್‌ಗಳನ್ನು ಅಳವಡಿಸಲು ಶ್ರೀ ಉಮೇಶ್, ಚಂದ್ರ ರೆಡ್ಡಿ, ಮತ್ತು ಇತರೆ ಸದಸ್ಯರು ಸ್ಥಳೀಯ ನಾಗರೀಕರು ಮತ್ತು ಸಾರ್ವಜನಿಕರು ಸಭೆಯಲ್ಲಿ ತಿಳಿಸಿದ್ದು, ಈ ಬಗ್ಗೆ ಸ್ಥಳ ಪರಿಶೀಲಿಸಿ ಕ್ರಮ ವಹಿಸುವುದಾಗಿ ತೋಟಗಾರಿಕೆ ಅಧೀಕ್ಷಕರು ಸಭೆಗೆ ತಿಳಿಸಿದರು.
  3. ವಾರ್ಡ್‌ನ ಘನತ್ಯಾಜ್ಯ ನಿರ್ವಹಣೆಯ ಲಾರಿ ಪಾಯಿಂಟ್ ಹತ್ತಿರ ಅನಧಿಕೃತವಾಗಿ ಎರಡು ಕಡೆಯಿಂದ ಗೇಟ್‌ನ್ನು ಹಾಕಿಕೊಂಡಿರುತ್ತಾರೆ ಎಂದ ಶ್ರೀ ಉಮೇಶ್ ಮತ್ತು ಇತರೆ ಸದಸ್ಯರು ಸಭೆಯ ಗಮನಕ್ಕೆ ತಂದಿದ್ದು, ಈ ಬಗ್ಗೆ ಅಧ್ಯಕ್ಷರು/ನೋಡಲ್ ಅಧಿಕಾರಿಗಳು ಸ್ಥಳ ಪರಿಶೀಲಿಸಿ ಹದ್ದುಬಸ್ತು ಮಾಡಿಸಲು ಶ್ರೀ ಚಂದ್ರಶೇಖರ ತೋಟಗಾರಿಕೆ ಅಧೀಕ್ಷಕರು (ಬೊಮ್ಮನಹಳ್ಳಿ ವಲಯ) ರವರಿಗೆ ಸೂಚಿಸಿದರು.
  4. ವಾರ್ಡ್ ವ್ಯಾಪ್ತಿಯ ಎ.ಟಿ.ಎ ಉದ್ಯಾನವನ ಮತ್ತು ಹೊಸಪಾಳ್ಯ ನರ್ಸರಿಯಲ್ಲಿ ಪಾದಚಾರಿ ಮಾರ್ಗ, ಬೀದಿ ದೀಪ ಕುಳಿತುಕೊಳ್ಳುವ ಬೆಂಚ್ ತೆರೆದ ಜಿಮ್, ಶೌಚಾಲಯ ಮತ್ತು ಇತ್ಯಾದಿ ಸೌಲಭ್ಯಗಳನ್ನು ಅಳವಡಿಸಲು ಶ್ರೀ ಉಮೇಶ್, ಚಂದ್ರರೆಡ್ಡಿ, ಗೋಪಿನಾಥ ಮತ್ತು ಇತರೆ ಸದಸ್ಯರು ವಾರ್ಡ್ ಗಮನಕ್ಕೆ ತಂದಿದ್ದು, ಈ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು, (ಹೆಚ್.ಎಸ್.ಆರ್) ಮತ್ತು ಯೋಜನೆ ವಿಭಾಗದೊಂದಿಗೆ ಜಂಟಿಯಾಗಿ ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಕಡತವನ್ನು ಮಂಡಿಸಲು ಕ್ರಮವಹಿಸುವುದಾಗಿ ಶ್ರೀ ಚಂದ್ರಶೇಖರ ತೋಟಗಾರಿಕ ಅಧೀಕ್ಷಕರು (ಬೊಮ್ಮನಹಳ್ಳಿ ವಲಯ) ರವರು ಸಭೆಗೆ ತಿಳಿಸಿದರು.

- <u>ಆರೋಗ್ಯ ಇಲಾಖೆ</u> :-
  1. ಹಿಂದಿನ ಸಭೆಯ ದಿನಾಂಕ: 12.010.2021 ರಂದು ಶ್ರೀ ಉಮೇಶ್ ರವರು ಮಂಗಮ್ಮನಪಾಳ್ಯ ವಾರ್ಡ್ ವ್ಯಾಪ್ತಿಯಲ್ಲಿ ನಕಲಿ ವೈದ್ಯರ ಹಾವಳೀ ಜಾಸ್ತಿಯಾಗಿದೆ ಹಾಗೂ ನಕಲಿ ಆಸ್ಪತ್ರೆಗಳ ಸಂಖ್ಯೆ ಜಾಸ್ತಿಯಾಗಿದ್ದು, ಇದೊಂದು ಮೆಡಿಕಲ್ ಮಾಫಿಯಾ ಎಂದು ಸಭೆಯಲ್ಲಿ ಚರ್ಚಿಸಲಾಗಿದ್ದು, ಇಂದಿನ ಸಭೆಗೆ ಹಾಜರಿದ್ದ ಡಾ|| ಯೋಗೇಶ್, ಡಾ|| ಮಾಧವಿ ಮತ್ತು ಶ್ರೀ ವಿನೋದ್ ಹಿರಿಯ ಆರೋಗ್ಯ ಪರಿವೀಕ್ಷಕರು ರವರು ಸರ್ವೆ ಮಾಡಲಾಗುತ್ತಿದ್ದು, ಮುಂದಿನ ಸಭೆಯಲ್ಲಿ ಮಾಹಿತಿ ನೀಡಲಾಗುವುದೆಂದು ಸಭೆಗೆ ತಿಳಿಸಿದರು.
  2. ವಾರ್ಡ್ ವ್ಯಾಪ್ತಿಯಲ್ಲಿ ಇಲ್ಲಿಯವರೆಗೆ ಕೋವಿಡ್ ಪ್ರಕರಣದಿಂದ ಎಷ್ಟು ಸಾವು ಸಂಭವಿಸಿದೆ ಹಾಗೂ ಎಷ್ಟು ಕುಟುಂಬಳಿಗೆ ಪರಿಹಾರವನ್ನು ನೀಡಲಾಗಿದೆ ಎಂದು ಶ್ರೀ ಉಮೇಶ್, ಶ್ರೀ ಸುರೇಶ್ ರೆಡ್ಡಿ ಮತ್ತು ಇತರೆ ಸದಸ್ಯರು ವಾರ್ಡ್ ಸಭೆಯಲ್ಲಿ ಪ್ರಸ್ತಾಪಿಸಿದ್ದು, ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ ವಿನೋದ್ ಹಿರಿಯ ಆರೋಗ್ಯ ಪರಿವೀಕ್ಷಕರು ರವರು ಇದುವರೆಗೂ ಕಂದಾಯ ಇಲಾಖೆಯಿಂದ ಸರ್ವೆ ಮಾಡಿ ಒಟ್ಟು 47 ಅರ್ಜಿ ಸ್ವೀಕರಿಸಲಾಗಿದ್ದು, ಒಟ್ಟು 22 ಕುಟುಂಬ ವರ್ಗದವರಿಗೆ ಒಂದುವಾರದೊಳಗೆ ಅವರವರ ಖಾತೆಗೆ ಹಣ ಪಾವತಿಸಲಾಗುವುದೆಂದು ಸಭೆಗೆ ತಿಳಿಸಿದರು.

- <u>ವಿದ್ಯುತ್ ಇಲಾಖೆ ಬಿಬಿಎಂಪಿ :-</u>
  1. ವಾರ್ಡ್ ವ್ಯಾಪ್ತಿಯಲ್ಲಿ ಸಂಜೆ ವೇಳೆ ಬೀದಿ ದೀಪ ನಿರ್ವಹಣೆಯಾಗುತ್ತಿರುತ್ತದೆಯೇ ಎಂದು ಸರ್ವೆ ಮಾಡಲು ಶ್ರೀ ಉಮೇಶ್, ಶ್ರೀ ಚಂದ್ರ ರೆಡ್ಡಿ, ಶ್ರೀ ಸುರೇಶ್ ರೆಡ್ಡಿ ರವರು ಸಭೆಯಲ್ಲಿ ತಿಳಿಸಿದ್ದು, ಈ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು ವಿದ್ಯುತ್ ವಿಭಾಗ ರವರ ಸಭೆಗೆ ಗೈರು ಆಗಿರುವುದರಿಂದ ಮುಂದಿನ ಸಭೆಗೆ ಬೀದಿ ದೀಪ ನಿರ್ವಾಹಕರ ಜೊತೆಯಲ್ಲಿ ಸಭೆಗೆ ಹಾಜರಾಗುವಂತೆ ಅಧ್ಯಕ್ಷರು/ನೋಡಲ್ ಅಧಿಕಾರಿಗಳು ರವರು ಸಭೆಯಲ್ಲಿ ಸಹಾಯಕ ಅಭಿಯಂತರರು, ವಿದ್ಯುತ್ ವಿಭಾಗ ರವರ ಪರವಾಗಿ ಸಭೆಯಲ್ಲಿ ಹಾಜರಿದ್ದ ಬೀದಿ ದೀಪ ನಿರ್ವಾಹಕರಿಗೆ ಸೂಚಿಸಿದರು.

Scanned with

2. ವಾರ್ಡ್ ವ್ಯಾಪ್ತಿಯಲ್ಲಿ ಹೊಸಪಾಳ್ಯ ವಿದ್ಯುತ್ ಚಿತ್ರಗಾರ ರಸ್ತೆಯಲ್ಲಿ, ಬಸ್ ನಿಲ್ದಾಣ ಎದುರು ರಸ್ತೆಯಲ್ಲಿ ಬೀದಿ ದೀಪ ಸರಿಯಾಗಿ ನಿರ್ವಹಣೆಯಾಗುತ್ತಿಲ್ಲವೆಂದು ಶ್ರೀ ಉಮೇಶ್, ಶ್ರೀ ಸುರೇಶ್ ರೆಡ್ಡಿ ಮತ್ತು ಇತರೆ ಸದಸ್ಯರು ಸಭೆಯಲ್ಲಿ ತಿಳಿಸಿದ್ದು, ಈ ಬಗ್ಗೆ ಸಹಾಯಕ ಅಭಿಯಂತರರು, ವಿದ್ಯುತ್ ವಿಭಾಗ ರವರ ಪರವಾಗಿ ಸಭೆಯಲ್ಲಿ ಹಾಜರಿದ್ದ ಬೀದಿ ದೀಪ ನಿರ್ವಾಹಕರು ಸ್ಥಳ ಪರಿಶೀಲಿಸಿ ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು.

- **<u>ಕಾಮಗಾರಿ ಇಲಾಖೆ:</u>**

1. ಹಿಂದಿ ಸಭೆಯ ದಿನಾಂಕ: 12.10.2021 ರಂದು ವಾರ್ಡ್ ಸದಸ್ಯರು ಮತ್ತು ನಾಗರೀಕರ ಮನವಿಯಂತೆ ವಾರ್ಡ್ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯಗಳಾದ ವರ್ಡ್ ರಸ್ತೆ ನಿರ್ವಹಣೆ, ಚರಂಡಿಗಳ ನಿರ್ವಹಣೆ ಮತ್ತು ರಸ್ತೆಗಳ ಅಭಿವೃದ್ಧಿ ಇತರೆ ಅಭಿವೃದ್ದಿ ಕಾಮಗಾರಿಗಳಿಗೆ ಕ್ರಿಯಾಯೋಜನೆ ಸಿದ್ದಗೊಳಿಸಲಾಗಿದ್ದು, ಮಾನ್ಯ ಶಾಸಕರ ಮತ್ತು ಇತರೆ ಲೆಕ್ಕ ಶಿರ್ಷಿಕೆ ಅಡಿಯಲ್ಲಿ ಅನುದಾನ ಪಡೆದುಕೊಂಡು, ಟೆಂಡರ್ ಕರೆದು, ಕಾರ್ಯದೇಶ ಪಡೆದ ನಂತರ ಕಾಮಗಾರಿಗಳನ್ನು ಕೈಗೊಳ್ಳಲಾಗುವುದೆಂದು ಸಹಾಯಕ ಅಭಿಯಂತರರು/ಕಾರ್ಯದರ್ಶಿ ರವರು ಸಭೆಯಲ್ಲಿ ತಿಳಿಸಿದರು.

- **<u>ಕಂದಾಯ ಇಲಾಖೆ</u>**

1. ಹಿಂದಿನ ಸಭೆಯ ದಿನಾಂಕ: 12.10.2021 ರಂದು ವಾರ್ಡ್ ವ್ಯಾಪ್ತಿಯಲ್ಲಿ ಸರ್ವೆ ಸಂಖ್ಯೆ: 44ರಲ್ಲಿ 20.00 ಗುಂಟೆ ಜಮೀನನ್ನು ಆಸ್ಪತ್ರೆ ನಿರ್ಮಾಣಕ್ಕೆ ಮೀಸಲಿಟ್ಟಿದ್ದು, ಈ ಬಗ್ಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಮತ್ತು ತಹಸೀಲ್ದಾರ ಬೆಂಗಳೂರು ರವರಿಗೆ ಪತ್ರ ಬರೆಯುವಂತೆ ಪ್ರಸ್ತಾಪಿಸಲಾಗಿದ್ದು, ಈ ಬಗ್ಗೆ ಸಹಾಯಕ ಕಂದಾಯ ಅಧಿಕಾರಿ ಪರವಾಗಿ ಹಾಜರಿದ ಶ್ರೀ ಅಬ್ದುಲ್ ರೆಹಮಾನ್ ಕಂದಾಯ ನಿರೀಕ್ಷಕರು ರವರು ಈಗಾಗಲೇ ತಹಸೀಲ್ದಾರ ರವರಿಗೆ ಪತ್ರ ಬರೆಯಲಾಗಿದೆ. ಸದರಿ ಅಧಿಕಾರಿಯವರೆ ಕ್ರಮ ವಹಿಸಬಹುದಾಗಿ ಎಂದು ಸಭೆಗೆ ತಿಳಿಸಿದರು.

- **<u>ಬೆಸ್ಕಾಂ ಇಲಾಖೆ</u>**

1. ಹಿಂದಿನ ಸಭೆಯ ದಿನಾಂಕ: 12.10.2021 ರಂದು ವಾರ್ಡ್ ವ್ಯಾಪ್ತಿಯಲ್ಲಿ ವಿದ್ಯುತ್ ಕಂಬಗಳಲ್ಲಿ ಇಂಟರ್‌ನೆಟ್ ಕೇಬಲ್‌ಗಳನ್ನು ಅಳವಡಿಸಿದ್ದು, ಸದರಿ ಇಂಟರ್‌ನೆಡ್ ಕೇಬಲ್‌ಗಳನ್ನು ತೆರವುಗೊಳಿಸುವಂತೆ ಸದಸ್ಯರಾದ ಉಮೇಶ್ ಮತ್ತು ಮೌಲಸಾಬ್ ರವರು ವಾರ್ಡ್ ಗಮನಕ್ಕೆ ತಂದಿದ್ದು, ಸಭೆಯಲ್ಲಿ ಹಾಜರಿದ್ದ ಬೆಸ್ಕಾಂ ಸಹಾಯಕ ಅಭಿಯಂತರರು, ಶ್ರೀ ವಿರಿಯ ಕುಮಾರ್ ರವರಿಗೆ ನೋಟಿಸ್ ನೀಡಿ ಕ್ರಮ ಜರುಗಿಸಲು ನೋಡಲ್ ಅಧಿಕಾರಿಗಳು ಸೂಚಿಸಿದರು.

ಮೇಲಿನ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ಕೂಲಂಕುಷವಾಗಿ ಚರ್ಚಿಸಿ, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿದ್ದ ಎಲ್ಲಾ ಸದಸ್ಯರಿಗೆ ಮತ್ತು ಅಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

N. Rajagopalachari

ಕಾರ್ಯದರ್ಶಿ, ವಾರ್ಡ್ ನಂ.190ರ
ಸಹಾಯಕ ಅಭಿಯಂತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು/ನೋಡಲ್ ಅಧಿಕಾರಿ ವಾರ್ಡ್ ನಂ.190
ಮಂಗಮ್ಮನಪಾಳ್ಯ ಹಾಗೂ
ಸಹಾಯಕ ಕಾರ್ಯಪಾಲಕ ಅಭಿಯಂತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

3/11/2021

**ಪ್ರತಿಯನ್ನು:-**

1. ಮಾನ್ಯ ಆಡಳಿತಗಾರರು, ಬಿ.ಬಿ.ಎಂ.ಪಿ. ರವರ ಆಪ್ತ ಶಾಖೆಗೆ ಸಲ್ಲಿಸಿದೆ
2. ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ.ರವರ ಆಪ್ತ ಶಾಖೆಗೆ ಸಲ್ಲಿಸಿದೆ.
3. ಮಾನ್ಯ ವಲಯ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರ ಆಪ್ತ ಶಾಖೆಗೆ ಸಲ್ಲಿಸಿದೆ
4. ಮಾನ್ಯ ವಿಶೇಷ ಆಯುಕ್ತರು, (ಆಡಳಿತ) ರವರ ಆಪ್ತ ಶಾಖೆಗೆ ಸಲ್ಲಿಸಿದೆ.
5. ಜಂಟಿ ಆಯುಕ್ತರು (ಬೊಮ್ಮನಹಳ್ಳಿ ವಲಯ) ರವರ ಅವಗಾಹನೆಗಾಗಿ ಸಲ್ಲಿಸಿದೆ
6. ವಾರ್ಡ್ ಸಮಿತಿಯ ಸದಸ್ಯರ ಮಾಹಿತಿಗಾಗಿ ಸಲ್ಲಿಸಿದೆ.

Scanned with